ಅ) ಪ್ರಸ್ತುತ ಈ ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿರುವುದಿಲ್ಲ.

**ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಯಲ್ಲಿ ಕೇಂದ್ರ ರಸ್ತೆನಿಧಿ ಕಾಮಗಾರಿ**

224(596) ಶ್ರೀ ಕೃಷ್ಣಮೂರ್ತಿ ಎ.ಆರ್. (ಸಂತೇಮರಳ್ಳಿ) ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

1. ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಯಲ್ಲಿ ಯಾವ ಯಾವ ರಸ್ತೆಗಳನ್ನು ಕೇಂದ್ರ ರಸ್ತೆ ನಿಧಿ ಯೋಜನೆಯನ್ವಯ ಅಭಿವೃದ್ಧಿ ಕಾರ್ಯಕ್ಕಾಗಿ ಕೈಗೆತ್ತಿಕೊಳ್ಳಲಾಗಿದೆ. ಯಾವ ಯಾವ ಅಭಿವೃದ್ಧಿ ಕಾಮಗಾರಿಗೆ ಎಷ್ಟು ಹಣ ಮಂಜೂರಾಗಿದೆ ಹಾಗೂ ಈ ಅಭಿವೃದ್ಧಿ ಕಾಮಗಾರಿಗಳು ಯಾವ ಹಂತದಲ್ಲಿದೆ ಈ ಬಗ್ಗೆ ಕ್ಷೇತ್ರವಾರು ವಿವರ ನೀಡುವುದು?

2. ಹೊಸದಾಗಿ ಕೈಗೆತ್ತಿಕೊಂಡಿರುವ ಬೆಂಗಳೂರು-ಕನಕಪುರ-ಕೊಳ್ಳೇಗಾಲ-ಸಂತೇಮರಳ್ಳಿ-ಚಾಮರಾಜನಗರ-ಕೊಯಮತ್ತೂರು ಹಾಗೂ ಟಿ. ನರಸೀಪುರ-ಮೈಸೂರು-ನಂಜನಗೂಡು ಗುಂಡ್ಲುಪೇಟೆ ಊಟಿ ರಸ್ತೆಗಳನ್ನು ರಾಷ್ಟ್ರೀಯ ಹೆದ್ದಾರಿಗೆ ಸೇರಿಸಲಾಗಿದ್ದು, ಈ ರಾಷ್ಟ್ರೀಯ ಹೆದ್ದಾರಿಗಳ ನಡುವೆ ಸಂಪರ್ಕ ಕಲ್ಪಿಸುವ ರಸ್ತೆಗಳು ಯಾವುವು? ಇವುಗಳ ಅಭಿವೃದ್ಧಿಗಾಗಿ ಕೈಗೊಂಡಿರುವ ಕ್ರಮ ಏನು? ಹಾಗೂ ಈ ರಸ್ತೆಗಳನ್ನು ಯಾವ ಯೋಜನೆಯನ್ವಯ ಅಭಿವೃದ್ಧಿ ಪಡಿಸಲಾಗುವುದು? ವಿವರ ನೀಡುವುದು.

ಶ್ರೀ ಧರ್ಮಸಿಂಗ್ (ಲೋಕೋಪಯೋಗಿ ಸಚಿವರು):

1. ಕೇಂದ್ರ ರಸ್ತೆ ನಿಧಿ ಯೋಜನೆಯಡಿಯಲ್ಲಿ ಮೈಸೂರು ಜಿಲ್ಲೆಯಲ್ಲಿ ಈವರೆವಿಗೂ ರೂ. 180.00 ಲಕ್ಷಗಳ ಅಂದಾಜಿನಡಿ ಮೂರು ಕಾಮಗಾರಿಗಳು ಮತ್ತು ಚಾಮರಾಜನಗರ ಜಿಲ್ಲೆಯಲ್ಲಿ ರೂ. 61.00 ಲಕ್ಷಗಳ ಅಂದಾಜಿನಡಿ ಒಂದು ಕಾಮಗಾರಿ ಮಂಜೂರಾಗಿದ್ದು ಇವುಗಳ ವಿವರಗಳನ್ನು ಲಗತ್ತಿಸಿರುವ ಅನುಬಂಧದಲ್ಲಿ-1 ನೀಡಿದೆ.

2. ಬೆಂಗಳೂರು-ಕನಕಪುರ-ಕೊಳ್ಳೇಗಾಲ-ಸಂತೇಮರಳ್ಳಿ-ಚಾಮರಾಜನಗರ-ಕೊಯಮತ್ತೂರು ರಸ್ತೆಯ ರಾಷ್ಟ್ರೀಯ ಹೆದ್ದಾರಿ 209 ಆಗಿದ್ದು, ಟಿ. ನರಸೀಪುರ-ಮೈಸೂರು ನಂಜನಗೂಡು ಗುಂಡ್ಲುಪೇಟೆವರೆಗಿನ ರಸ್ತೆ ರಾಷ್ಟ್ರೀಯ ಹೆದ್ದಾರಿ 212 ಆಗಿದ್ದು. ಈ ಎರಡು ರಸ್ತೆಗಳ ನಡುವೆ ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಯಲ್ಲಿ ಈ ಕೆಳಗಿನ ರಸ್ತೆಗಳು ಸಂಪರ್ಕ ಕಲ್ಪಿಸುತ್ತವೆ.

1) ಮಳವಳ್ಳಿ ಮೈಸೂರು ರಸ್ತೆ ರಾಜ್ಯ ಹೆದ್ದಾರಿ 17ಎ ಈ ರಸ್ತೆಯು ಮಳವಳ್ಳಿಯಿಂದ ರಾಷ್ಟ್ರೀಯ ಹೆದ್ದಾರಿ 209 ರಿಂದ ಬೇರ್ಪಟ್ಟು ಮೈಸೂರಿನಲ್ಲಿ ರಾಷ್ಟ್ರೀಯ ಹೆದ್ದಾರಿ 212ನ್ನು ಸೇರುತ್ತದೆ. ಈ ರಸ್ತೆಯನ್ನು ಮೂರು ವರ್ಷಗಳ ವಿಶೇಷ ನಿರ್ವಹಣೆಯಡಿ ಕೆಆರ್‌ಡಿಸಿಎಲ್ ಮುಖಾಂತರ 53.56 ಲಕ್ಷ ರೂ. ಗಳ ಮಂಜೂರಾತಿ ಪಡೆದು 5.30 ಕಿ.ಮೀ .ರಸ್ತೆಯನ್ನು ಮರು ಡಾಂಬರೀಕರಣ ಮಾಡಲಾಗಿರುತ್ತದೆ. ಹಾಗೂ 36 ಕಲ್ವರ್ಟ್‌ಗಳನ್ನು ದುರಸ್ತಿ ಪಡಿಸಲಾಗಿದ್ದು 6:2004 ರವರೆಗೂ ಈ ರಸ್ತೆಯನ್ನು ನಿರ್ವಹಿಸಲಾಗುವುದು. ಇದಲ್ಲದೆ 2000-01ರ ಸಾಲಿನಲ್ಲಿ 3054 ಯೋಜನೇತರ ಶೀರ್ಷಿಕೆಯಲ್ಲಿ 80.00 ಲಕ್ಷ ರೂ. ಗಳ ವೆಚ್ಚದಲ್ಲಿ 13.00 ಕಿಮೀ ರಸ್ತೆಯನ್ನು ಮರು ಡಾಂಬರೀಕರಣ ಮಾಡಲಾಗಿದ್ದು ಪೂರ್ಣ ರಸ್ತೆಯ ಸುಸ್ಥಿತಿಯಲ್ಲಿರುತ್ತದೆ.

2. ಟಿ. ನರಸೀಪುರ ಸಂತೇಮರಳ್ಳಿ ರಸ್ತೆ ಇದು ಜಿಲ್ಲಾ ಮುಖ್ಯ ರಸ್ತೆಯಾಗಿದ್ದು ಇದು ಮೂಗೂರು ಕ್ರಾಸ್ ಬಳಿ ರಾಷ್ಟ್ರೀಯ ಹೆದ್ದಾರಿ 212 ರಿಂದ ಸಂತೇಮರಳ್ಳಿ ಬಳಿ ರಾಷ್ಟ್ರೀಯ ಹೆದ್ದಾರಿ 209ಕ್ಕೇ ಸೇರುತ್ತದೆ. ಇದರ ಉದ್ದ 8.40 ಕಿಮೀ. ಈ ರಸ್ತೆಯನ್ನು 3054 ಯೋಜನೆಯಡಿ 10.00 ಲಕ್ಷ ರೂ. ಗಳ ವೆಚ್ಚದಲ್ಲಿ 1.05 ಕಿಮೀ. ಉದ್ದದ ರಸ್ತೆಯನ್ನು ಡಾಂಬರೀಕರಿಸಲಾಗಿದೆ. ಉಳಿದ ಭಾಗವನ್ನು ಸಾಮಾನ್ಯ ದುರಸ್ಥಿತಯಲ್ಲಿ ನಿರ್ವಹಿಸಲಾಗುತ್ತಿದೆ (ಸಿ.ಡಿ.)

3. ಗುಂಡ್ಲುಪೇಟೆ-ತೆರಕಣಾಂಚಿ-ಚಾಮರಾಜನಗರ ರಸ್ತೆ. ಈ ರಸ್ತೆಯು ಗುಂಡ್ಲುಪೇಟೆಯಲ್ಲಿ ರಾಷ್ಟ್ರೀಯ ಹೆದ್ದಾರಿ 212 ರಿಂದ ಪ್ರಾರಂಭವಾಗಿ ಚಾಮರಾಜನಗರ ಬಳಿ ರಾಷ್ಟ್ರೀಯ ಹೆದ್ದಾರಿ 209ಕ್ಕೆ ಸೇರುತ್ತದೆ. ಸದರಿ ರಸ್ತೆಯು ಜಿಲ್ಲಾ ಮುಖ್ಯ ರಸ್ತೆಯಾಗಿದ್ದು ಒಟ್ಟು 32.50 ಕಿಮೀ.ಗಳ ಉದ್ದವಿರುತ್ತದೆ. ಈ ರಸ್ತೆಯ ಆಯ್ದಾ ಭಾಗಗಳನ್ನು ಕೇಂದ್ರ ರಸ್ತೆ ಯೋಜನೆಯಡಿಯಲ್ಲಿ ರೂ. 80.00 ಲಕ್ಷಗಳ ಅನುದಾನವನ್ನು ಒದಗಿಸಿಕೊಂಡು ಅಭಿವೃದ್ಧಿಪಡಿಸಲು ಕ್ರಮವನ್ನು ಕೈಗೊಳ್ಳಲಾಗುತ್ತಿದೆ.

**Annexure-I**

| Sl. No. | Name of District/ Constituency | Category of Road | Name of the Road | Govt. Order No. & Job No. | Estimated cost Rs. in Lakhs | Remarks |
|---|---|---|---|---|---|---|
| 1 | 2 | 3 | 4 | 5 | 6 | 7 |
| 1. | Mysore/ K.R. Nagar | MDR | Improvement to road from Akkihebbal Beeraiah Saligrama road in Mysore District. | PWD/3/CRF/ 2001, dated 2-1-2002 CRF/ KNT-01. | 75.00 | Work under progress. |
| 2. | Mysore/ T. Narasipura | MDR | Improvement to Nanjungud T. Narasipura road CH:20.82 to 27.20 KM in T. Nara sipura Taluk. | - do - CRF/79/KNT 2001. | 5.00 | - do - |
| 3. | Mysore/ Nanjangud | MDR | Impts. to Nanjungud Yadeyala road Haro halli Handhipura Road | PWD/3/CRF/ 2001(O) dt. 25-6-2002 CRF 124/KNT/2002. | 55.00 | Technical sanction accorded. Tender invited |
| 4. | C.R. Nagar/ | MDR | Improvements to Sargur Honganur road. | - do - CER/125/KNT 2002 | 61.00 | - do - |
| | | | **Total Estimate Cost.** | | **241.00 Lakhs** | |